ನಿರ್ಣಯದ ಜೊತೆಗೆ ಅವರ ಸ್ಮರಣೆ ಮಾಡುವ ಮೂಲಕ ಕೆಲವು ಮಾತುಗಳನ್ನು ಹೇಳುತ್ತೇನೆ. ಇವತ್ತು ರಾಜ್ಯದ , ರಾಷ್ಟ್ರದ ಏಳಿಗೆಗೆ ಅಪಾರ ಸೇವೆ ಸಲ್ಲಿಸಿದ ಅನೇಕ ಜನರ ಗುಣಗಾನವನ್ನು ಮಾಡುತ್ತಿದ್ದೇವೆ. ಇದರ ಜೊತೆಗೆ ನಾನು ಒಂದೇ ಒಂದು ಸಲಹೆಯನ್ನು ತಮಗೆ ಈ ಸಂದರ್ಭದಲ್ಲಿ ಈ ಸಭೆಯ ಮುಖಾಂತರ ತಿಳಿಸಲು ಇಚ್ಛಿಪಡುತ್ತೇನೆ. ಅನೇಕ ಜನರ ನಿಧನದ ನಂತರ ಅವರ ಸಂತಾಪ ಸೂಚಕ ನಿರ್ಣಯವನ್ನು ಮಾಡಿ ಅಲ್ಲಿಗೆ ಕೈ ಬಿಟ್ಟುಬಿಡುತ್ತೇವೆ. ಅದಾದ ನಂತರ ಅವರ ಕುಟುಂಬದ ಜೀವನದ ಪ್ರಶ್ನೆ ಏನು? ಅವರ ಮನೆಗಳ ಪ್ರಶ್ನೆ ಏನು? ಎನ್ನತಕ್ಕಂಥದ್ದರ ಬಗ್ಗೆ ನಾವು ಯಾರೂ ಇದುವರೆಗೂ ಪರಿಶೀಲನೆ ಮಾಡಿಲ್ಲ. ಈ ನಿರ್ಣಯವಾದ ಮೇಲೆ ಮುಂದೆ ಏನು? ನಾನು ಅನೇಕ ಬಾರಿ ನೋಡಿದ್ದೇನೆ. ಮಾಜಿ ಶಾಸಕರು ಯಾರಾದರೂ ತೀರಿಕೊಂಡರೆ ಅವರ ಮಕ್ಕಳು ವಿಧಾನ ಸೌಧಕ್ಕೆ ಅಲೆದು ಮಂತ್ರಿಗಳ ಹತ್ತಿರ ಹೋದರೆ ಅವರನ್ನು ಕೇಳುವವರೇ ಗತಿ ಇಲ್ಲ. ಅಂತಹ ಜನರು ನಿಧನರಾದಾಗ ನಾವು ಇಲ್ಲಿ ಸಂತಾಪ ಸೂಚಕ ನಿರ್ಣಯವನ್ನು ಮಾಡಿದಾಗ ನಾವು ಇಲ್ಲಿ ಎಷ್ಟು ಪ್ರಾಮಾಣಿಕವಾಗಿ ಸಂತಾಪ ಸೂಚಕ ನಿರ್ಣಯವನ್ನು ಮಾಡುತ್ತೇವೆಯೋ ಅಷ್ಟೇ ಪ್ರಾಮಾಣಿಕವಾಗಿ ಅವರ ಮನೆತನದ ಪ್ರಶ್ನೆ ಏನು? ಅವರ ಜೀವನದ ಪ್ರಶ್ನೆ ಏನು ಅವರನ್ನೇ ನಂಬಿರತಕ್ಕಂಥ ಜನರ ಪ್ರಶ್ನೆ ಏನು ಎನ್ನುವುದನ್ನು ಸಹ ಗಮನಿಸಬೇಕಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಿ ಮೃತರಾದ 11 ಜನರ ಆತ್ಮಕ್ಕೆ ಶಾಂತಿ ದೊರಕಲೆಂದು ಹಾರೈಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ (ಕಿತ್ತೂರು):- ಮಾನ್ಯ ಅಧ್ಯಕ್ಷರೇ, ಹಿರಿಯ ವ್ಯಕ್ತಿಗಳು ನಮ್ಮ ಸಮಕಾಲೀನ ಸಮಾಜದ ಸಂಪತ್ತು. ವ್ಯಕ್ತಿಯ ಹಿರಿಮೆ ಕಿರಿಮೆ ಅವರ ಕೃತ್ಯ ಮತ್ತು ಅವರ ಆಲೋಚನೆಗಳಿಂದ ವ್ಯಕ್ತವಾಗುತ್ತದೆ. ಅವರ ಒಂದು ಶ್ರೇಷ್ಠ ಕೃತ್ಯಗಳಿಂದ ಮತ್ತು ಆಲೋಚನೆಗಳಿಂದ ಮಾತ್ರ ಗೋಚರವಾಗುತ್ತದೆ. ಆಂತೆಯೇ ಶ್ರೀಮಾನ್ ಕಮಲಾಪತಿ ತ್ರಿಪಾಠಿಯವರು ಸಮಕಾಲೀನ ಸಮಾಜ ಜೀವನದ ಒಂದು ಶ್ರೀಮಂತಿಕೆಯನ್ನು ತಂದುಕೊಟ್ಟಿದ್ದರು. ಅವರ ಅಗಲಿಕೆಯಿಂದ ನಮ್ಮ ಸಮಾಜ ಇಂದು ಬಡವಾಗಿದೆ. ಅವರಂತೆ ಇನ್ನುಳಿದ ಹತ್ತು ಜನ ಧುರೀಣರು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರ ನೆನಪು ನಾವು ಮಾಡಿಕೊಂಡು ಅವರ ಕುಟುಂಬದವರು ಆ ಶಕ್ತಿಯನ್ನು ಭರಿಸಲು ಭಗವಂತ ಶಕ್ತಿ ಕೊಡಲೆಂದು ನಾನು ಆಸೆ ಮಾಡಿ ನನ್ನ ಪರವಾಗಿ ಮತ್ತು ನಮ್ಮ ಪಕ್ಷದ ಪರವಾಗಿ ಅವರ ಮನಸ್ಸಿಗೆ ಶಾಂತಿ ಸಿಗಲೆಂದು ನಾನು ಆಸೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

SRI QUAMARUL ISLAM: (Gulbarga):- Mr. Speaker, Sir, today 11 great personalities are not with us and particularly Sri Kamalapathi Tripathiji, I must say at this juncture that when there was a great threat and challenge to the very secularism and integrity of this country on 9th November 1989, the great dynamic leader Tripathiji said that he will not allow "Karseva" on the disputed land. Today, the country is facing the same situation. Today, he is not here with us. We offer our heartfelt condolences for the demise of these great personalities. I on my behalf and on behalf of my party, pray to the Almighty that may their souls rest in peace.

ಅಧ್ಯಕ್ಷರು:- ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನ ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸಭೆ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿತು.)

ಹುಟ್ಟು ಹಬ್ಬದ ಶುಭಾಶಯಗಳು

ಅಧ್ಯಕ್ಷರು:- ಶ್ರೀ ಗುಜ್ಜಲ ಹನುಮಂತಪ್ಪನವರು ಸದನದಲ್ಲಿ ಇದ್ದಾರೆಯೇ?

ಶ್ರೀ ಗುಜ್ಜಲ ಹನುಮಂತಪ್ಪ:- ಇದ್ದೇನೆ.

ಅಧ್ಯಕ್ಷರು:– ಇವತ್ತು ನಿಮ್ಮ ಹುಟ್ಟಿದ ದಿವಸವಾಗಿರುವುದರಿಂದ ನಾನು ಸದನದ ಪರವಾಗಿ ನಿಮಗೆ ಹಾರ್ದಿಕವಾದಂಥ ಶುಭಾಶಯಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು:– ಈಗ ಮಾನ್ಯ ಮುಖ್ಯ ಮಂತ್ರಿಯವರು ತಮ್ಮ ಸಚಿವ ಸಂಪುಟದ ಸದಸ್ಯರುಗಳನ್ನು ಸದನಕ್ಕೆ ಪರಿಚಯ ಮಾಡಿಕೊಡಬೇಕು.

ಶ್ರೀ ಎಸ್. ಬಂಗಾರಪ್ಪ:– ಮಾನ್ಯ ಸಭಾಧ್ಯಕ್ಷರೇ, ನೂತನವಾಗಿ ರಚನೆಯಾಗಿರತಕ್ಕಂಥ ನಮ್ಮ ಮಂತ್ರಿಮಂಡಲದ ಸದಸ್ಯರುಗಳನ್ನು ನಾನು ತಮ್ಮ ಮುಖೇನ ಈ ಸದನಕ್ಕೆ ಪರಿಚಯ ಮಾಡಿಕೊಡುವಂಥ ಕೆಲಸ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೆ, ನನ್ನದು ಕ್ರಿಯಾಲೋಪವಿದೆ. ಇವರು ಮುಖ್ಯಮಂತ್ರಿಗಳಾಗಿರುವುದಕ್ಕೆ ಬಲಾಬಲ ಎಷ್ಟು ಇದೆ ಎಂದು ಪ್ರದರ್ಶನವಾಗಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಇವರು ಮುಖ್ಯ ಮಂತ್ರಿಗಳೆಂದು ಮೊದಲು ತೀರ್ಮಾನವಾಗಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಮುಖ್ಯ ಮಂತ್ರಿಗಳು, ಅವರ ಮಂತ್ರಿಮಂಡಲದ ಸದಸ್ಯರುಗಳನ್ನು ಪರಿಚಯ ಮಾಡಿಕೊಡುವುದರ ಬಗ್ಗೆ ನಮ್ಮ ವಿರೋಧ ಇಲ್ಲ. ಆದರೆ ಇಲ್ಲಿ ನಡೆದು ಬಂದಿರುವ ಪರಿಪಾಠ ಏನೆಂದರೆ, ಹೊಸ ಮುಖ್ಯ ಮಂತ್ರಿಗಳಾದವರು ಅವರಿಗೆ ಬಹುಮತ ಇದೆಯೆಂದು ಸಾಬೀತು ಆದ ಮೇಲೆ ಕ್ಯಾಬಿನೆಟ್ ಸದಸ್ಯರುಗಳ ಪರಿಚಯ ಮಾಡಿಕೊಡಬಹುದು. ಆ ಪದ್ಧತಿಯನ್ನು ಮೊದಲಿನಿಂದಲೂ ಅನುಸರಿಸಿಕೊಂಡು ಬರಲಾಗಿದೆ. ಬೇಕಾದರೆ ಹಿಂದಿನ ರೆಕಾರ್ಡ್ಸ್‌ನ್ನು ತೆಗೆಸಿ ನೋಡಿ. ಆ ಪದ್ಧತಿಗೆ ವ್ಯತಿರಿಕ್ತವಾಗಿ ಈಗ ನಡೆಯುವುದು ಬೇಡ. ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ಈ ದಿನದ ಅಜೆಂಡಾದಲ್ಲೂ ಸಹಾ ಸನ್ಮಾನ್ಯ ಬಂಗಾರಪ್ಪನವರು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸುವುದು ಎಂದು ಹೇಳಿ, "ಈ ಸದನವು ಶ್ರೀ ಎಸ್. ಬಂಗಾರಪ್ಪ ಅವರ ನೇತೃತ್ವದ ಮಂತ್ರಿ ಮಂಡಲದಲ್ಲಿ ತನ್ನ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ". ಎಂದು ನಮೂದು ಮಾಡಲಾಗಿದೆ. ಈ ಪದ್ಧತಿಯಂತೆ ನಡೆದರೆ ನಮ್ಮ ವಿರೋಧ ಇಲ್ಲ.

ಶ್ರೀ ವಾಟಾಳ್ ನಾಗರಾಜ್:– ಬಹುಮತ ಇದೆಯೆಂದು ಆ ಕಡೆಯವರು ಕೂಗಾಡಿದರೆ ಅದಕ್ಕೆ ತಾವು ಬೆಲೆ ಕೊಡಬಾರದು. ಬಹುಮತವನ್ನು ಪ್ರದರ್ಶನ ಮಾಡದೇ ಹೋದರೆ ಅದು ಕರ್ತವ್ಯಲೋಪವಾಗುತ್ತದೆ.

(ಗೊಂದಲ)

MR. SPEAKER:- Order Please.

ಶ್ರೀ ಬಿ.ಹೆಚ್. ಬನ್ನಿಕೋಡ್:– ಅವರು ಮುಖ್ಯ ಮಂತ್ರಿಗಳಾಗಿರಬಹುದು, ಆದರೆ ಇಲ್ಲಿ ಅದು ಸಾಬೀತಾಗಬೇಕು. ಅನಂತರ ಅವರು ತಮ್ಮ ಸಚಿವ ಸಂಪುಟದ ಸದಸ್ಯರುಗಳನ್ನು ಪರಿಚಯ ಮಾಡಿಕೊಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೇ, ಸಚಿವ ಸಂಪುಟದ ಸದಸ್ಯರುಗಳನ್ನು ಪರಿಚಯ ಮಾಡಿಕೊಡುವುದರ ಬಗ್ಗೆ ನಮ್ಮ ವಿರೋಧ ಇಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮೊದಲು ಅವರು ಮುಖ್ಯ ಮಂತ್ರಿಯಾಗಿರುವ ಬಗ್ಗೆ ಮತ್ತು ಅದನ್ನು ಸದನದಲ್ಲಿ ಸಾಬೀತು ಮಾಡುವ ಬಗ್ಗೆ ತಾವು ರೂಲಿಂಗ್ ಕೊಡಬೇಕು. ಅವರು ಸಭಾನಾಯಕರೆಂದು ತೀರ್ಮಾನವಾದ ಮೇಲೆ ಅವರ ಮಂತ್ರಿ ಮಂಡಲದ ಸದಸ್ಯರುಗಳನ್ನು ಸದನಕ್ಕೆ ಪರಿಚಯ ಮಾಡಿಕೊಡಲಿ.

ಅಧ್ಯಕ್ಷರು: ಮಾನ್ಯ ಸಿಂಧ್ಯರವರು ಕ್ರಿಯಾಲೋಪ ಎತ್ತಿದ್ದಾರೆ. ಅವರು ಹೇಳಲಿ.